ಆ) ಈ ವರ್ಷ ಕಾರ್ಖಾನೆಯಲ್ಲಿ 471 ಸಿಬ್ಬಂದಿ ತರಬೇತಿದಾರರೆಂದು (ಟ್ರೇನೀಜ್) ಕೆಲಸ ಮಾಡಿರುತ್ತಾರೆ.

ಇ) ಸದರಿ ಕಾರ್ಖಾನೆಗೆ ಪ್ರಾರಂಭಿಕ ಹಂತದಲ್ಲಿ 1989 ರಲ್ಲಿ ಸರ್ಕಾರವು ಒಟ್ಟು 11 ಹುದ್ದೆಗಳನ್ನು ಮಂಜೂರು ಮಾಡಿರುತ್ತದೆ. ಈ ಪೈಕಿ ಕೇವಲ 4 ಜನ ಮಾತ್ರ ಖಾಯಂ ನೇಮಕಾತಿಗೊಂಡಿರುತ್ತಾರೆ. ಕಾರ್ಖಾನೆಯು 2500 ಟಿಸಿಡಿ ಸಾಮರ್ಥ್ಯವಾಗಿದ್ದು, ಸಾಮರ್ಥ್ಯಕ್ಕನುಗುಣವಾಗಿ ಸಿಬ್ಬಂದಿ ವೃಂದಬಲ ವೇತನಶ್ರೇಣಿ ಮಂಜೂರಾತಿಗೆ ಕಾರ್ಖಾನೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಕೃಷಿ ಪಾಠಶಾಲೆಗಳ ಮಾಹಿತಿ ಬಗ್ಗೆ

4224 (4842) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೃಷಿ ಪಾಠಶಾಲೆಗಳು ಎಷ್ಟು;

ಆ) ಕಳೆ ಮೂರು ವರ್ಷಗಳಲ್ಲಿ ಈ ಪಾಠಶಾಲೆಗಳಲಿ ತರಬೇತಿ ಹೊಂದಿದ ರೈತರ ಸಂಖ್ಯೆ ಎಷ್ಟು; ಪಾಠಶಾಲೆವಾರು ಮತ್ತು ವರ್ಷವಾರು ವಿವರ ಕೊಡುವುದು;

ಇ) ಈ ರೀತಿ ತರಬೇತಿ ಪಡೆದ ರೈತರಲ್ಲಿ ಎಷ್ಟು ಜನ ಸ್ವಯಂ ಉದ್ಯೋಗ ಪ್ರಾರಂಭಿಸಿದ್ದಾರೆ; ತರಬೇತಿ ಪಡೆದ ರೈತರು ಬೇರೆ ಕಡೆ ಗುಳೆ ಹೋಗಿದ್ದಾರೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌಆದರೆ ಇದನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು;

ಈ) ಕೃಷಿ ಮತ್ತು ಸಂಬಂಧಪಟ್ಟ ವಿಷಯಗಳ ಬಗ್ಗೆ ವಿದ್ಯಾಪೀಠಗಳಲ್ಲಿ ಡಿಪ್ಲೋಮಾ ಶೈಲಿಯ ವಿದ್ಯಾಭ್ಯಾಸಕ್ಕೆ ಅವಕಾಶ ಕಲ್ಪಿಸಿಕೊಡುವ ಉದ್ದೇಶ ಇದೆಯೇ;

ಉ) ಹೌದಾದರೆ ಈ ನಿಟ್ಟಿನಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ರಾಜ್ಯದಲ್ಲಿ 12 ಕೃಷಿ ಪಾಠಶಾಲೆಗಳು ಇವೆ ಅವುಗಳ ವಿವರಗಳು ಇಂತಿದೆ.

ಕ್ರ.ಸಂ.	ಸ್ಥಳ	ಜಿಲ್ಲೆ
1)	ಅರಕಲಗೂಡು	ಹಾಸನ
2)	ಬ್ರಹ್ಮಾವರ	ಉಡುಪಿ
3)	ಭೂವನಹಳ್ಳಿ	ಕೋಲಾರ
4)	ಚಿಕ್ಕನಹಳ್ಳಿ	ತುಮಕೂರು
5)	ಹೊಂಬಳ	ಗದಗ್
6)	ಚಂದೂರಾಯನಹಳ್ಳಿ	ಬೆಂಗಳೂರು (ಗ್ರಾ)
7)	ಹರದನಹಳ್ಳಿ	ಚಾಮರಾಜನಗರ
8)	ಕುಮಟಾ	ಉತ್ತರ ಕನ್ನಡ
9)	ಮಳಗಿ	ಉತ್ತರ ಕನ್ನಡ
10)	ಕೊಟ್ನೂರು	ಗುಲ್ಬರ್ಗಾ
11)	ಸೋಮನಹಳ್ಳಿ	ಮಂಡ್ಯ
12)	ಹಳ್ಳಿಕೆರೆ	ಶಿವಮೊಗ್ಗ

ಆ) ವಿವರಗಳು ಇಂತಿವೆ.

ಕ್ರ.ಸಂ	ಸ್ಥಳ	ವರ್ಷ		
		2000 –01	2001 –02	2002 –03
1.	ಅರಕಲಗೂಡು	72	48	–
2.	ಬ್ರಹ್ಮಾವರ	64	146	376
3.	ಭುವನಹಳ್ಳಿ .	–	–	–
4.	ಚಿಕ್ಕನಹಳ್ಳಿ	57	192	–
5.	ಹೊಂಬಳ (ಕಂಪ್ಲಿ)	45	48	–
6.	ಚಂದೂರಾಯನಹಳ್ಳಿ (ಕಾಗತಿ) .	50	81	–
7.	ಹರದನಹಳ್ಳಿ (ಕೊಡಿಗೆ).	59	73	
8.	ಕುಮಟಾ	59	73	–
9.	ಮಳಗಿ	40	19	–
10.	ಕೊಟ್ನೂರು	59	61	–
11.	ಸೋಮನಹಳ್ಳಿ	50	136	–
12.	ಹಳ್ಳಿಕೆರೆ (ತ್ಯವಣಿಗೆ)	53	40	

.ಆವರಣಗಳಲ್ಲಿರುವ ಹೆಸರುಗಳು ವರದಿಯ ಅವಧಿಯಲ್ಲಿ ಶಾಲೆ ಇದ್ದ ಸ್ಥಳಗಳನ್ನು ಸೂಚಿಸುತ್ತವೆ

ವಸತಿನಿಲಯ ಸೌಕರ್ಯ ಇಲ್ಲದ ಮೂಲಕ ಕಾಗತಿಗೆ ತರಬೇತಿಗಳನ್ನು ವರ್ಗಾಯಿಸಲಾಗಿತ್ತು.

ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು ಅಸ್ತಿತ್ವಕ್ಕೆ ಬಂದುದರಿಂದ 2002–03ನೇ ಸಾಲಿನಲ್ಲಿ ಬ್ರಹ್ಮಾವರ ಹೊರತು ಉಳಿದೆಡೆಗಳಲ್ಲಿ ತರಬೇತಿಗಳನ್ನು ನಡೆಸಲಿಲ್ಲ ತನ್ಮೂಲಕ ಎಂಟು ಕೃಷಿ ಪಾಠಶಾಲೆಗಳನ್ನು ರದ್ದುಪಡಿಸುವ ಮತ್ತು ನಾಲ್ಕು ಪಾಠಶಾಲೆಗಳನ್ನು (ಹರದನಹಳ್ಳಿ, ಬ್ರಹ್ಮಾವರ, ಹೊಂಬಳ ಮತ್ತು ಚಂದೂರಾಯನಹಳ್ಳಿ, ಜಿಲ್ಲಾ ಕೃಷಿ ತರಬೇತಿ ಕೆಂದ್ರಗಳನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.)

ಇ) ವೈಜ್ಞಾನಿಕ ಕೃಷಿಯನ್ನು ಅಳವಡಿಸಲು ಸಹಾಯ ಮಾಡುವ ಮುಖ್ಯ ಉದ್ದೇಶದೊಂದಿಗೆ ರೈತರ ಮಕ್ಕಳಿಗೆ ತರಬೇತಿಯನ್ನು ನೀಡಲಾಗುತ್ತದೆ. ಈ ರೀತಿ ತರಬೇತಿ ಪಡದೆ ವ್ಯಕ್ತಿಗಳು ಬೇರೆಡೆಗೆ ವಲಸೆ ಹೋದ ಮಾಹಿತಿಯು ಸರ್ಕಾರದಲ್ಲಿ ಇರುವುದಿಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಪ್ರಾಂಗಣದ ವಹಿವಾಟಿನ ಬಗ್ಗೆ

4224 (4840) : ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಕೃಷಿ ಮತ್ತು ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?